ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 13–10–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕೆ.ಎಸ್.ಆರ್.ಪಿ. ತರಬೇತಿ ಮತ್ತು ಸಂಶೋಧನಾ ಕೇಂದ್ರ ಕಟ್ಟಡದ ಉದ್ಘಾಟನಾ ಸಮಾರಂಭ:<br><br>**ಉದ್ಘಾಟನೆ:**<br><br>ಶ್ರೀ ಕೆ.ಜೆ. ಜಾರ್ಜ್,<br>ಗೃಹ ಸಚಿವರು.<br><br>**ಅಧ್ಯಕ್ಷತೆ:**<br><br>ಶ್ರೀ ಎನ್. ಎ. ಹ್ಯಾರೀಸ್,<br>ಶಾಸಕರು,<br>ಶಾಂತಿನಗರ ವಿಧಾನಸಭಾ ಕ್ಷೇತ್ರ<br><br>**ಮುಖ್ಯ ಅತಿಥಿಗಳು:**<br><br>ಶ್ರೀ ವೆಂಕಯ್ಯನಾಯ್ಡು<br>ಕೇಂದ್ರ ನಗರಾಭಿವೃದ್ಧಿ ಸಚಿವರು.<br><br>ಶ್ರೀ ಅನಂತಕುಮಾರ್,<br>ಕೇಂದ್ರ ರಸಗೊಬ್ಬರ ಮತ್ತು ರಾಸಾಯನಿಕ ಸಚಿವರು<br><br>ಶ್ರೀ ಡಿ.ವಿ. ಸದಾನಂದಗೌಡ,<br>ಕೇಂದ್ರ ರೈಲ್ವೆ ಸಚಿವರು.<br><br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು,<br><br>ಶ್ರೀ ಆರ್. ರೋಷನ್ ಬೇಗ್,<br>ವಾರ್ತಾ, ಮೂಲಭೂತ ಸೌಕರ್ಯ ಹಾಗೂ ಹಜ್ | 14-10-2014<br>ಮಂಗಳವಾರ<br>ಬೆಳಿಗ್ಗೆ<br>10–30 ಗಂಟೆಗೆ | ಕೆ.ಎಸ್.ಆರ್.ಪಿ. ತರಬೇತಿ ಮತ್ತು ಸಂಶೋಧನಾ ಕೇಂದ್ರ,,<br>ಕಮೀಷನರೇಟ್ ರಸ್ತೆ,<br>ಅಶೋಕ ನಗರ ಪೊಲೀಸ್ ಠಾಣೆ ಪಕ್ಕ, ಗರುಡಾಮಾಲ್ ಎದುರು,<br>ಬೆಂಗಳೂರು. |

| | | | |
|---|---|---|---|
| | ಸಚಿವರು.<br><br>ಶ್ರೀ ದಿನೇಶ್ ಗುಂಡೂರಾವ್,<br>ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. | | |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ದೂರ ಶಿಕ್ಷಣದ ಮೂಲಕ ಕನ್ನಡ ಭಾಷೆಯಲ್ಲಿ ಒಂದು ವರ್ಷದ ಕೃಷಿ ಡಿಪ್ಲೋಮೊ

**ಬೆಂಗಳೂರು, ಅಕ್ಟೋಬರ್ 13 (ಕರ್ನಾಟಕ ವಾರ್ತೆ)**

ಕೃಷಿಯಲ್ಲಿ ಹೊಸ ಅವಿಷ್ಕಾರಗಳನ್ನು ದೂರ ಶಿಕ್ಷಣದ ಮೂಲಕ, ರೈತರಿಗೆ/ಆಸಕ್ತರಿಗೆ ಮುಟ್ಟಿಸುವ ಸಲುವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು 2014-15 ನೇ ಶೈಕ್ಷಣಿಕ ವರ್ಷದಿಂದ ದೂರ ಶಿಕ್ಷಣದ ಮೂಲಕ ಕನ್ನಡ ಭಾಷೆಯಲ್ಲಿ ಒಂದು ವರ್ಷದ ಕೃಷಿ ಡಿಪ್ಲೋಮಾ ನಡೆಸಲಿದೆ.

ಈ ಕೋರ್ಸ್‌ಗೆ ಹತ್ತನೇ ತರಗತಿ ಪಾಸಾದವರು ಅರ್ಹರಾಗಿದ್ದು, ರೂ 100/- ಮೌಲ್ಯದ ನಗದು/ಡಿ.ಡಿ./ಪೋಸ್ಟಲ್ ಆರ್ಡರ್‌ರನ್ನು "ಕಂಟ್ರೋಲರ್, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ. ಬೆಂಗಳೂರು", ಇವರ ಹೆಸರಿನಲ್ಲಿ ಪಡೆದು ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಸಲ್ಲಿಸಿ, ಅರ್ಜಿಯನ್ನು ವಿಸ್ತರಣಾ ನಿರ್ದೇಶಕರು, ವಿಸ್ತರಣಾ ನಿರ್ದೇಶನಾಲಯ, ಹೆಬ್ಬಾಳ, ಬೆಂಗಳೂರು - 560 024 /ಕೃಷಿ ವಿಜ್ಞಾನ ಕೇಂದ್ರಗಳಿಂದ/ಕೃಷಿ ಮಹಾವಿದ್ಯಲಯಗಳಿಂದ ಅರ್ಜಿಗಳನ್ನು ಪಡೆದು ಮೇಲಿನ ವಿಳಾಸಕ್ಕೆ ಕಳುಹಿಸಿಕೊಡಬೇಕು.

ಹೆಚ್ಚಿನ ವಿವರಗಳನ್ನು ಕೃಷಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uasbangalore.edu. ನಿಂದ ಪಡೆಯಬಹುದು. ಅಥವಾ ದೂರವಾಣಿ ಸಂಖ್ಯೆ 080 -23418883/ಮೊ. 9449551060 ಗೆ ಸಂಪರ್ಕಿಸಬಹುದು.

ಕವನ:ಬಿಜಿಪಿ:ಜಿಪಿಆರ್

## ಕಲಾಶ್ರೀ ಪ್ರಶಸ್ತಿಗಾಗಿ ಆಯ್ಕೆ ಶಿಬಿರ

**ಬೆಂಗಳೂರು, ಅಕ್ಟೋಬರ್ 13 (ಕರ್ನಾಟಕ ವಾರ್ತೆ)**

ಬಾಲಭವನವು ಮಕ್ಕಳ ದಿನಾಚರಣೆ–2014 ರ ಅಂಗವಾಗಿ ರಾಜ್ಯ ಮಟ್ಟದ ಕಲಾಶ್ರೀ ಪ್ರಶಸ್ತಿಗಾಗಿ ಆಯ್ಕೆ ಶಿಬಿರವನ್ನು ಸೃಜನಾತ್ಮಕ ಕಲೆ, ಸೃಜನಾತ್ಮಕ ಬರವಣಿಗೆ, ಸೃಜನಾತ್ಮಕ ಪ್ರದರ್ಶನ ಕಲೆ ಹಾಗು ವಿಜ್ಞಾನದಲ್ಲಿ ನೂತನ ಅವಿಷ್ಕಾರ, ಈ ಪ್ರಕಾರಗಳಲ್ಲಿ ಬೆಂಗಳೂರು ನಗರ ಜಿಲ್ಲೆಯ ಉತ್ತರ/ದಕ್ಷಿಣ ಭಾಗ ಹಾಗೂ ತಾಲ್ಲೂಕಿನ 9 ರಿಂದ 16 ವರ್ಷದೊಳಗಿನ ಮಕ್ಕಳಿಗಾಗಿ ಸ್ಥಳೀಯ ಮಟ್ಟದ ಆಯ್ಕೆ ಶಿಬಿರವನ್ನು ಅಕ್ಟೋಬರ್ 18 ಹಾಗೂ 19 ರಂದು ಏರ್ಪಡಿಸಿದೆ.

ಸೃಜನಾತ್ಮಕ ಕಲೆಯಲ್ಲಿ ಚಿತ್ರಕಲೆ, ಕರಕುಶಲ ಕಲೆ, ಜೇಡಿಮಣ್ಣಿನ ಕಲೆ ಮೂರರಲ್ಲೂ ಕಡ್ಡಾಯವಾಗಿ ಸ್ಪರ್ಧಿಗಳು ಭಾಗವಹಿಸಬೇಕು. ಹಾಳೆ ಮತ್ತು ಜೇಡಿಮಣ್ಣನ್ನು ನೀಡಲಾಗುವುದು . ವಿವಿಧ ಕರಕುಶಲ ಸಾಮಾಗ್ರಿಗಳನ್ನು ಸ್ಪರ್ಧಿಗಳೇ ತರಬೇಕು.

ಸೃಜನಾತ್ಮಕ ಬರವಣಿಗೆಯಲ್ಲಿ ಕಥೆ, ಕವನ ಪ್ರಬಂಧ ಮೂರರಲ್ಲೂ ಕಡ್ಡಾಯವಾಗಿ ಸ್ಪರ್ಧಿಗಳು ಭಾಗವಹಿಸಬೇಕು.

ಸೃಜನಾತ್ಮಕ ಪ್ರದರ್ಶನ ಕಲೆಯಲ್ಲಿ ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಕರ್ನಾಟಕ ಅಥವಾ ಹಿಂದೂಸ್ತಾನಿ, ಶಾಸ್ತ್ರೀಯ ಸಂಗೀತ, ವಾದ್ಯ ಸಂಗೀತ, ಸುಗಮ ಸಂಗೀತ, ಯಕ್ಷಗಾನ, ಯಕ್ಷಿಣಿ ಪ್ರದರ್ಶನ, ಏಕಪಾತ್ರಾಭಿನಯ, ಯೋಗದೊಂದಿಗೆ ನೃತ್ಯ ಇವುಗಳಲ್ಲಿ ಯಾವುದಾದರೂ ಒಂದು ಕಲೆಯನ್ನು ಸ್ಪರ್ಧಿಗಳು ಪ್ರದರ್ಶಿಸಬೇಕು.

ವಿಜ್ಞಾನದಲ್ಲಿ ನೂತನ ಅವಿಷ್ಕಾರದಲ್ಲಿ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಒಂದು ವಿಷಯದ ಬಗ್ಗೆ ಮಾದರಿ ಪ್ರದರ್ಶನ ಹಾಗೂ ವಿವರಣೆ ಮತ್ತು ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತೀರ್ಪುಗಾರರ ಇನ್ನಿತರ ಪ್ರಶ್ನೆಗಳಿಗೆ ಉತ್ತರವನ್ನು ಸ್ಪರ್ಧಿಗಳು ನೀಡಬೇಕು.

ಹೆಚ್ಚಿನ ವಿವರ ಹಾಗೂ ನೋಂದಣಿಗಾಗಿ ಕಾರ್ಯದರ್ಶಿಗಳ ಕಚೇರಿ, ಬಾಲ ಭವನ ಸೊಸೈಟಿ, ಕಬ್ಬನ್ ಉದ್ಯಾನವನ, ಬೆಂಗಳೂರು –1, ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 22864189/22861423 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಬಾಲಭವನದ ಸೊಸೈಟಿ ಪ್ರಕಟಣೆ ತಿಳಿಸಿದೆ.

ಕವನ:ಬಿಜಿಪಿ:ಜಿಪಿಆರ್

## ಮಹಿಳೆಯರಲ್ಲಿ ಜಾಗೃತಿ ಮೂಡಿಸುವಂತಹ
## ವಿಶೇಷ ಸ್ಪರ್ಧೆಗಳಿಗೆ ಆಹ್ವಾನ

**ಬೆಂಗಳೂರು, ಅಕ್ಟೋಬರ್ 13 (ಕರ್ನಾಟಕ ವಾರ್ತೆ)**

ರಾಜ್ಯ ಮಹಿಳಾ ಆಯೋಗವು ನಾಡಹಬ್ಬ ಮೈಸೂರು ದಸರಾ - 2014 ರ ಪ್ರಯುಕ್ತ ಮೈಸೂರಿನ ಕರ್ನಾಟಕ ವಸ್ತು ಪ್ರದರ್ಶನದಲ್ಲಿ ಮಳಿಗೆಯೊಂದನ್ನು ಪಡೆದಿದೆ. ಮೂರು ತಿಂಗಳುಗಳ ಕಾಲ ಮಹಿಳಾ ಮತ್ತು ಅಭಿವೃದ್ಧಿ ಇಲಾಖೆಯೊಂದಿಗೆ ಪ್ರದರ್ಶನ, ಮಹಿಳೆಯರಲ್ಲಿ ಆಯೋಗದ ಕುರಿತಂತೆ ಜಾಗೃತಿ ಮೂಡಿಸುವುದರ ಜೊತೆಗೆ ಹಲವಾರು ವಿಶೇಷ ಕಾರ್ಯಕ್ರಮಗಳನ್ನು ಮತ್ತು ಸ್ಪರ್ಧೆಗಳನ್ನು ಹಮ್ಮಿಕೊಂಡಿದೆ.

ಮಹಿಳೆಯರ ಶಕ್ತಿ, ಮಹಿಳಾ ದೌರ್ಜನ್ಯ, ಮಹಿಳೆಯರ ಮೇಲಿನ ಅಪರಾಧಗಳನ್ನು ತಡೆಗಟ್ಟುವ ಮತ್ತು ಮಹಿಳಾ ಆಯೋಗದ ಕಾರ್ಯಕ್ರಮದ ಕುರಿತಂತೆ ಜನರಿಗೆ ಜಾಗೃತಿ ಮೂಡಿಸುವಂತಹ **"ಘೋಷಣಾ ಸ್ಪರ್ಧೆ"** ಹಾಗೂ **ಚಿತ್ರಕಲೆ ಸ್ಪರ್ಧೆ** ಸ್ವಯಂ ರಕ್ಷಣೆ ಕುರಿತಂತೆ **"ಕೊಲ್ಯಾಜ್ ಸ್ಪರ್ಧೆ",** ಪ್ರಸ್ತುತದಲ್ಲಿ ಮಹಿಳೆಯರ ಸವಾಲುಗಳು ಮತ್ತು ಪರಿಣಾಮಗಳ ಕುರಿತು **ಪ್ರಬಂಧ ಸ್ಫರ್ಧೆ** ಯನ್ನು ಏರ್ಪಡಿಸಲಾಗಿದೆ.

ಮಹಿಳೆಯರಿಗೆ ಸಂಬಂಧಿಸಿದ ಕಲೆ, ಸಾಹಿತ್ಯ, ಕ್ರೀಡೆ ಇನ್ನಿತರ ಕ್ಷೇತ್ರಗಳ ಬಗ್ಗೆ ಸಾಮಾನ್ಯ ಜ್ಞಾನದ ಕುರಿತಂತೆ **ರಸಪ್ರಶ್ನೆ ಸ್ಪರ್ಧೆ** ಯನ್ನು ಪ್ರತಿ ಭಾನುವಾರ ವಸ್ತು ಪ್ರದರ್ಶನದ ಆಯೋಗದ ಮಳಿಗೆಯಲ್ಲಿ ನಡೆಸಲಾಗುವುದು.

ಭಾಗವಹಿಸಲು ಇಚ್ಛಿಸುವ ಸ್ಪರ್ಧಿಗಳು ಘೋಷಣೆಗಳು, ಚಿತ್ರಕಲೆ, ಕೊಲ್ಯಾಜ್ ಹಾಗೂ ಪ್ರಬಂಧವನ್ನು ನವೆಂಬರ್ 15 ರೊಳಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗ, ನಂ 107, ಕಾವೇರಿ ಭವನ, 1ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು - 560 009 ಇವರಿಗೆ ಕಳುಹಿಸಬೇಕು. ಸ್ಪರ್ಧೆಯ ನಿಯಮ, ಷರತ್ತು ಹಾಗೂ ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 080 - 22216486 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಪ್ರಕಟಣೆ ತಿಳಿಸಿದೆ.

ಕವನ:ಬಿಜಿಪಿ:ಜಿಪಿಆರ್.

# Dak Adalat

**Bangalore, October 13 (Karnataka Information)**

The Chief Postmaster General, Karnataka Postal Circle, No. 1, Palace Road (Opposite Maharani's College of Science) Bangalore -560 001 will conduct a "Dak Adalat" for redressal of public grievances relating to Postal Services on 29th October 2014 at 3-30 hours. Members of the public and esteemed customers

of Department of Posts in Bangalore Region may address their grievances if any, to the Assistant Director (Postal Operations O/o Chief Postmaster General, Karnataka Circle, Bangalore -560 001, so as to reach the officer latest by 21st October 2014. Grievances can also be sent by e-mail to karcopo@gmail.com. It is requested that brief and specific details with relevant facts and figures may please be furnished along with complete contact details to facilitate speedy redressal.

### ವಿದ್ಯಾಸಿರಿ ಯೋಜನೆ, ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ
### ಅರ್ಜಿ ಸರಿಪಡಿಸಲು ಅವಕಾಶ

**ಬೆಂಗಳೂರು, ಅಕ್ಟೋಬರ್ 13 (ಕರ್ನಾಟಕ ವಾರ್ತೆ)**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ, ಮೆಟ್ರಿಕ್ -ನಂತರದ ವಿದ್ಯಾರ್ಥಿವೇತನ ಹಾಗೂ ಶುಲ್ಕ ವಿನಾಯಿತಿ ಸೌಲಭ್ಯಕ್ಕಾಗಿ ದಿನಾಂಕ 25-9-2014 ಮತ್ತು 15-10-2014 ರ ಒಳಗಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಅರ್ಜಿಗಳನ್ನು ಭರ್ತಿ ಮಾಡುವಾಗ ಲೋಪದೋಷಗಳಿದ್ದಲ್ಲಿ, ಅಂತವುಗಳನ್ನು ವಿದ್ಯಾರ್ಥಿಗಳು, ಕಾಲೇಜಿಗೆ ಭೇಟಿ ನೀಡಿ ಪ್ರಾಂಶುಪಾಲರ Login ನಿಂದ ಅಕ್ಟೋಬರ್ 25 ರ ಒಳಗಾಗಿ ಸರಿಪಡಿಸಿಕೊಳ್ಳಲು ಸೂಚಿಸಿರುವುದಾಗಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.